ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/04/ಐಡಿಪಿ/2017-18/28

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01,
ದಿನಾಂಕ:31-08-2017

ಜ್ಞಾಪನ

ವಿಷಯ: Rally for River ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್. ಸ್ವಯಂಸೇವಕರನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: 1) ರಾಜ್ಯ ಸರ್ಕಾರದ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/ಸಾಮಾನ್ಯ/2017-18/212 ದಿನಾಂಕ: 29.08.2017
2) ರಾಜ್ಯ ಸರ್ಕಾರದ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/ಸಾಮಾನ್ಯ/2017-18/214 ದಿನಾಂಕ: 30.08.2017

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ,Rally for River-India's Lifeline ಸಂಸ್ಥೆಯವರು Rally for River ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.ಭಾರತದಲ್ಲಿ ಈಗಾಗಲೇ ಸಾವಿರಾರು ಸಣ್ಣ ನದಿಗಳು ಬತ್ತಿ ಹೋಗಿದ್ದು, ದೊಡ್ಡ ನದಿಗಳು ಕೂಡ ತಮ್ಮ ನೈಜತೆಯನ್ನು ಕಳೆದುಕೊಳ್ಳುತ್ತಿವೆ. ಇದರಿಂದ, ಅತಿವೃಷ್ಟಿ ಮತ್ತು ಅನಾವೃಷ್ಟಿ ಹಾಗೂ ಪ್ರಕೃತಿವಿಕೋಪಗಳು ಉಂಟಾಗುತ್ತಿವೆ. ಈ ಬಗ್ಗೆ ಜನಜಾಗೃತಿಯನ್ನು ಮೂಡಿಸುವುದಕ್ಕಾಗಿ ಸದರಿ ಸಂಸ್ಥೆಯವರು 16 ರಾಜ್ಯಗಳಲ್ಲಿ 20 ಕಾರ್ಯಕ್ರಮಗಳನ್ನು ಯೋಜಿಸಿದ್ದಾರೆ.ಒಂದು ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಯೋಜನೆ ಮಾಡಲಾಗಿದೆ.ದಿನಾಂಕ 09.09.2017 ರಂದು ಸಂಜೆ 5.00 ಗಂಟೆಗೆ ಮೇಕ್ರಿ ಸರ್ಕಲ್‌ನ ಅರಮನೆ ಮೈದಾನದ ಶ್ರೀ ಕೃಷ್ಣ ವಿಹಾರ ಇಲ್ಲಿ ಏರ್ಪಡಿಸಲಾಗಿದೆ. ಈ ಬಗ್ಗೆ ಅರಿವು ಮೂಡಿಸಲು ಶ್ರೀ ಸದ್ಗುರು ಜಗ್ಗಿ ವಾಸುದೇವರವರು ಹಾಗೂ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ಸಹಿತ ಹಲವು ಗಣ್ಯರು ಭಾಗವಹಿಸುವ ನಿರೀಕ್ಷೆಯಿದೆ. ಸದರಿ ಕಾರ್ಯಕ್ರಮಕ್ಕೆ ಈ ಕೆಳಗಿನಂತೆ ಸಯಂಸೇವಕರನ್ನು ನಿಯೋಜಿಸಲು ಸೂಚಿಸಲಾಗಿದೆ.

| ಕ್ರ.ಸಂ | ಪಾಲಿಟೆಕ್ನಿಕ್ ಹೆಸರು | ಸ್ವಯಂ ಸೇವಕ/ ಸೇವಕಿ |
|---|---|---|
| 01 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಬೆಂಗಳೂರು | 50 |
| 02 | ಸರ್ಕಾರಿ ಜಿ.ಆರ್.ಐ.ಸಿ.ಪಿ ಬೆಂಗಳೂರು | 50 |
| 03 | ಎಸ್.ಜೆ.(ಸರ್ಕಾರಿ) ಪಾಲಿಟೆಕ್ನಿಕ್ ಬೆಂಗಳೂರು | 50 |
| 04 | ಎ.ಪಿಎಸ್ ಪಾಲಿಟೆಕ್ನಿಕ್ ಬೆಂಗಳೂರು | 50 |
| 05 | ಎಂ.ಇ.ಐ ಪಾಲಿಟೆಕ್ನಿಕ್ ಬೆಂಗಳೂರು | 50 |
| 06 | ಶ್ರೀ ವೆಂಕಟೇಶ್ವರ ಪಾಲಿಟೆಕ್ನಿಕ್ ಬನ್ನೇರಘಟ್ಟ | 50 |

ಸ್ವಯಂ ಸೇವಕರ ಪ್ರಯಾಣಕ್ಕೆ ಅಗತ್ಯವಿದ್ದಲ್ಲಿ ಬಸ್ಸಿನ ವ್ಯವಸ್ಥೆಯನ್ನು ಸಂಘಟಕರು ಯೋಜಿಸಿರುತ್ತಾರೆ ವಿವರಗಳಿಗೆ ಶ್ರೀ ಸೇತುಪತಿ ಮೊಬೈಲ್ ನಂ. 9789994906 ಇವರನ್ನು ಸಮಪರ್ಕಿಸಲು ಕೋರಲಾಗಿದೆ. ಸದರಿ ಕಾರ್ಯಕ್ರಮವು ಅತ್ಯಂತ ಉಪಯುಕ್ತವಾಗಿರುವುದರಿಂದ ಮತ್ತು ಈ ಬಗ್ಗೆ ಅರಿವು ಮೂಡಿಸುವುದಾಗಿರುವುದರಿಂದ ಈ ಕಾರ್ಯಕ್ರಮಕ್ಕೆ ನಿಯೋಜಿಸುವುದು.

ನಿರ್ದೇಶಕರು

ಪ್ರತಿ: 1 .ಸಂಬಂಧಪಟ್ಟ ಪಾಲಿಟೆಕ್ನಿಕ್ ಪ್ರಾಚಾರ್ಯಗಳಿಗೆ-ಸೂಕ್ತ ಕ್ರಮಕ್ಕಾಗಿ
2. ರಾಜ್ಯ ಸಂಪರ್ಕಾಧಿಕಾರಿ ರಾಷ್ಟ್ರೀಯ ಸೇವಾ ಯೋಜನೆ ಯುವಜನ ಸೇವಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
3. ಇ-ಆಡಳಿತ ಅಂತರ್‌ಜಾಲತಾಣದಲ್ಲಿ ಪ್ರಕಟಿಸಲು
4. ಕಚೇರಿ ಕಡತಕೆ.